ಗಿರಿಧರನ ವರ್ತನೆಯನ್ನು ಗಮನಿಸಿದರೆ ಅವನು ನಿರುಪದ್ರವಿ ಎನಿಸುತ್ತಿದೆ.. ಆದರೂ ಅದನ್ನು ನನಗೆ ಬಲವಾಗಿ ನಂಬಲಾಗುತ್ತಿಲ್ಲ. ನನ್ನ ಫೋನು ನಂಬರ್ ತನ್ನ ಬಳಿ ಇದೆ ಎಂದು ಹೇಳಿದ ಈ ವ್ಯಕ್ತಿ ನನಗೇಕೆ ಫೋನು ಮಾಡುತ್ತಿಲ್ಲ.. ? ನಾನಿಲ್ಲದ ವೇಳೆಯಲ್ಲಿ ಸುಮ್ಮನೆ ನನ್ನ ಮನೆಯ ಬಳಿ ಬಂದು ಹೋಗುತ್ತಿರುವುದಾದಾರೂ ಯಾತಕ್ಕಾಗಿ..? ಈಗಿನ ಕಾಲದಲ್ಲಿ ಸುಲಭವಾಗಿ ಯಾರನ್ನೂ ನಂಬಲಾಗದು.. ಈ ಜಗತ್ತಿನಲ್ಲಿ ಬೆಣ್ಣೆಯಲ್ಲಿ ಕೂದಲು ತೆಗೆದಂತೆ ಮಾತನಾಡುವ ಎಷ್ಟೋ ಜನರ ಮನಸ್ಸಿನಲ್ಲಿ ಸ್ವಾರ್ಥ, ದುರುದ್ದೇಶಗಳು ಅಡಗಿರುತ್ತವೆ. ಅವುಗಳನ್ನು ಅವರು ಎಂದೂ ತೋರಗೊಡುವುದಿಲ್ಲ...

ಸರಿ.. ಈ ಗಿರಿಧರ, ಹೇಮಾವತಿ ಕಳುಹಿಸಿರುವ ಅವಳ ಭಂಟನೇ ಇರಬಹುದೆಂದು ತಿಳಿದರೂ ಅವಳ ಉದ್ದೇಶವಾದರೂ ಏನು..? ನನಗೆ ಪರಿಚಯವಾದಾಗ ಅವಳಿನ್ನೂ ಇಪ್ಪತ್ತರ ಆಸುಪಾಸಿನ ಮುಗ್ಧ ಹುಡುಗಿ. ಈಗ ಅವಳು ಇಪ್ಪತ್ತನಾಲ್ಕು ಇಪ್ಪತ್ತೈದರ ವಯಸ್ಸಿನವಳಿರಬಹುದು.. ವಯಸ್ಸಿನ ಪ್ರಬುದ್ಧತೆಯನ್ನು ಮೈಗೂಡಿಸಿಕೊಂಡಿರಬಹುದು.. ಅವಳ ಭಗ್ನಪ್ರೇಮದಿಂದ ಹತಾಶಳಾಗಿರಬಹುದು.. ಈ ಗಿರಿಧರ ಎಂಬ ಆಗಂತುಕನ ಜೊತೆ ಸೇರಿ ನನ್ನ ಹಾಲಿನಂತಹ ಸಂಸಾರದಲ್ಲಿ ಹುಳಿ ಹಿಂಡುವುದಕ್ಕಾಗಿಯೇ ಯಾವುದೋ ಕಾರ್ಯತಂತ್ರ ರೂಪಿಸಿರಬಹುದು.. ಈ ಹೇಮಾವತಿಯ ಬಾಲಿಶ ಏಕಮುಖ ಪ್ರೇಮ ಪ್ರಕರಣವನ್ನು ನಮ್ಮ ಸಾಂಸಾರಿಕ ಜೀವನ ತುಸು ಮಾಗಿದ ಮೇಲೆ ನಾನೇ ಶರಧಿಗೆ ತಿಳಿಸೋಣವೆಂದುಕೊಂಡಿದ್ದೇನೆ. ಆದರೆ ಇನ್ನೂ ಶೈಶಾವಸ್ಥೆಯಲ್ಲಿರುವ ನಮ್ಮಿಬ್ಬರ ವೈವಾಹಿಕ ಜೀವನದಲ್ಲಿ ನಾನೇ ಹೇಮಾವತಿ ಎಂಬ ಹುಡುಗಿಯನ್ನು ಪ್ರೀತಿಸಿ ಅವಳಿಗೆ ವಂಚಿಸಿದೆ ಎಂಬ ತಪ್ಪು ಸಂದೇಶವೇ ಆಗಲಿ ಅಥವಾ ಅಂತಹ ಒಂದು ಗಾಳಿಸುದ್ದಿಯೇ ಆಗಲೀ ನನ್ನ ಹೆಂಡತಿಗೆ ರವಾನೆಯಾಗಿ ಅವಳ ನಿರ್ಮಲ ಮನಸ್ಸಿನಲ್ಲಿ ತುಸುವೇ ಒಡಕು ಕಾಣಿಸಿದರೂ ನಾನು ಭೂಮಿಗಿಳಿದು ಹೋಗುತ್ತೇನೆ ಎಂಬ ಭೀತಿ ನನ್ನದು. ಗಾಳಿ ಸುದ್ದಿಗಳನ್ನು ಮನುಷ್ಯನ ಮನಸ್ಸು ಸುಲಭವಾಗಿ ಸ್ವೀಕರಿಸಿಬಿಡುತ್ತದೆ.. ಅವುಗಳಿಗೆ ಸಾಕ್ಷ್ಯಾಧಾರಗಳೇನೂ ಬೇಕಾಗಿಲ್ಲ.. ಈ ಜಗತ್ತಿನಲ್ಲಿ ಇಂತಹ ಗಾಳಿಸುದ್ದಿಗಳನ್ನು ಹರಡಿ ಮನುಷ್ಯನ ದೌರ್ಬಲ್ಯವನ್ನು ನಗದೀಕರಿಸಿಕೊಳ್ಳುವ ಜನರಿಗೇನೂ ಕೊರತೆ ಇಲ್ಲ..

**(ಸಶೇಷ)**

---

## ರಂಜಿಸಿದ ಕಾದಂಬರಿ; ಅಚ್ಚುಕಟ್ಟಾದ ನಿರೂಪಣೆ

ಕಾದಂಬರಿಕಾರ್ತಿ ಡಿ.ಎನ್.ಗೀತಾರವರ ಹದಿನಾರು ಕಂತುಗಳಲ್ಲಿ ಮೂಡಿಬಂದ 'ಮೌನ ಮಂಟಪ' ಧಾರಾವಾಹಿ ನಿಜಕ್ಕೂ ರಂಜಿಸಿತು. ನಿಗೂಢ ರಹಸ್ಯಗಳ ಅಡಗು ದಾಣವಾಗಿ ಹಲವು ವರ್ಷಗಳ ಕಾಲಘಟ್ಟದಲ್ಲಿ ರಹಸ್ಯಗಳ ಬಾಗಿಲುಗಳು ತೆರೆದು, ಆವಿಷ್ಕಾರಗೊಂಡದ್ದು, ಓದುಗರ ಕುತೂಹಲ ಕೆರಳಿಸಿತು. ಕಥೆ ಅಚ್ಚುಕಟ್ಟಾದ ರೂಪುರೇಷೆಗಳಲ್ಲಿ ಹರಿದುಬಂತು. ಕಥಾ ಶೀರ್ಷಿಕೆಯೇ ನಿಗೂಢತೆಯನ್ನು ಪ್ರತಿಪಾದಿಸುವುದರಲ್ಲಿ ಅಭಿವ್ಯಕ್ತಗೊಂಡಿರುವುದು ವಿಶೇಷ.

ಕಥೆಗೆ ಪೂರಕವಾಗಿ ಕಾಲ್ಪನಿಕ ಪಾತ್ರಗಳು ತಮ್ಮದೇ ಆದ ವ್ಯಕ್ತಿತ್ವಗಳನ್ನು ಋತು, ಹೇಮಂತ, ಕಲಾವತಿ ಹಾಗೂ ರಮ್ಯ ಅಲ್ಲದೆ ಉಳಿದ ಪಾತ್ರಗಳು ಓದುಗರು ಮೊದಲೇ ಊಹಿಸಲಾಗದಷ್ಟರ ಮಟ್ಟಿಗೆ ಲೇಖಕಿಯ ನೈಪುಣ್ಯತೆ ವ್ಯಕ್ತಗೊಂಡಿತು. ಸಮಗ್ರವಾಗಿ 'ಮೌನ ಮಂಟಪ ' ವಾತ್ಸಲ್ಯ, ಪ್ರೇಮ ಪ್ರೀತಿ, ರಹಸ್ಯ, ಪತ್ತೇದಾರಿಕೆ ಮೊದಲಾದ ಹೂರಣದಲ್ಲಿ ಸ್ವಾದಿಷ್ಟಕರವಾಗಿ ಮೂಡಿಬಂತು.

— ಪೂರ್ಣಿಮಾ ಮೂರ್ತಿ ಬೆಂಗಳೂರು

### ಪ್ರತಿ ಸಂಚಿಕೆಯಲ್ಲೂ ಕುತೂಹಲ

ಈ ಧಾರಾವಾಹಿ ಇತ್ತೀಚಿನ ದಿನಗಳಲ್ಲಿ ನಾನು ಓದಿದ ಒಂದು ಉತ್ತಮ ಪತ್ತೇದಾರಿ ಕಾದಂಬರಿಯಾಗಿದ್ದು, ಪ್ರತಿ ಸಂಚಿಕೆಯಲ್ಲೂ ಕುತೂಹಲ ಕಾಯ್ದುಕೊಂಡು ಬಂತು. ಮುಂದಿನ ಸಂಚಿಕೆಗೆಗಾಗಿ ತುದಿಗಾಲಿನಲ್ಲಿ ಕಾದು ಕೂರುವಂತೆ ಮಾಡುತ್ತಿತ್ತು. ಪ್ರತಿ ಪಾತ್ರವನ್ನೂ ಬಹಳ ಚೆನ್ನಾಗಿ ಚಿತ್ರಿಸಿದ್ದು, ಧಾರಾವಾಹಿ ಉತ್ತಮ ಅಂತ್ಯ ಕಂಡಿತು. ಕಥೆಗಾರ್ತಿಗೆ ಹಾಗೂ 'ಸುಧಾ'ಕ್ಕೆ ಅಭಿನಂದನೆಗಳು.

— ಬೃಂದಾ ವೀರೇಶ್, ಬೆಂಗಳೂರು, ಎಂ.ಕೆ. ನಾಗರಾಜ ಹಾಸನ,
ನೀಲಮ್ಮ ಕುಮಾರಪ್ಪ ಲಿಂಗಸಗೂರು, ಮುಕುಂದ ಹೆರಕಲ್ಲ ಕಲಬುರಗಿ,
ಡಿ.ವಿ. ಗಿರಿ ಬೆಂಗಳೂರು, ವಿಭಾ ಮುರಳೀಧರ್ ತುಮಕೂರು

### ವಿಶಿಷ್ಟ ಕಥಾ ಹಂದರ

ಪ್ರತಿ ಸಂಚಿಕೆಯೂ ಕುತೂಹಕಕಾರಿ ಹಾಗೂ ವಿಶಿಷ್ಟ ಕಥಾ ಹಂದರವನ್ನು ಹೊತ್ತು ತಂದಿತು. ಒಂದು ಪತ್ತೇದಾರಿ ಸಿನಿಮಾಗೆ ಬೇಕಾದ ಎಲ್ಲ ಅಂಶಗಳೂ ಕಾದಂಬರಿಯಲ್ಲಿದ್ದವು. ಮೌನಮಂಟಪ ಕೊನೆಗೆ ಶೃಂಗಾರಮಂಟಪವಾಗಿ ಸುಖಾಂತ್ಯ ಕಂಡದ್ದು, ಪತ್ತೇದಾರ ಹೇಮಂತನ ಪಾತ್ರದ ನಿರೂಪಣೆ ಎಲ್ಲವೂ ಸೊಗಸಾಗಿತ್ತು. ನಂದೀಶ್ವರ ದೇವಾಲಯದ ಬಗ್ಗೆ ಇನ್ನೂ ಹೆಚ್ಚಿನ ವಿವರಣೆ ನೀಡಬಹುದಿತ್ತು.

—ಕೆ.ಎನ್. ಪ್ರಭಾಕರಗುಪ್ತ ಹಾಸನ

### ಶ್ಲಾಘನೀಯ

ಪತ್ತೇದಾರಿ ಕಥೆ ಹಾಗೂ ನೈಜ ಜೀವನದ ಕಥೆಯ ಸಮ್ಮಿಶ್ರಣವಾಗಿ ಕಾದಂಬರಿ ಮೂಡಿಬಂದಿದೆ. ಕೆಲವೆಡೆ ವೇಗ ಪಡೆದುಕೊಂಡ ಕಥೆ ಕೊನೆಯವರೆಗೂ ರಹಸ್ಯವನ್ನು ಹಿಡಿದಿಟ್ಟುಕೊಂಡು ಬಂದಿರುವುದು ಗಮನಾರ್ಹ. ಕೆಲವೆಡೆ ನಂಬಲಸಾಧ್ಯವಾದ ತಿರುವೂ ಇತ್ತು. ಹೇಮಲತಾ 20 ವರ್ಷ ನೆಲಮಾಳಿಗೆಯಲ್ಲಿ ಕಳೆದಿರುವುದು ಅದರಲ್ಲೊಂದು. ಆದರೂ ಕೊನೆಯಲ್ಲಿ ಶುಭಮಂಗಳ ಹಾಡಿದ ಕಾದಂಬರಿ ಪ್ರತಿ ಕಂತುಗಳಲ್ಲೂ ಕುತೂಹಲವನ್ನು ಕಾಯ್ದಿರಿಸಿದ್ದಂತೂ ಶ್ಲಾಘನೀಯ.

—ಕೋಟೇಶ್ವರ ಸೂರ್ಯನಾರಾಯಣರಾವ್ ಬೆಂಗಳೂರು

### ಕೆಲವೆಡೆ ಭಯ ಹುಟ್ಟಿಸುವಂತಿತ್ತು

ಕಾದಂಬರಿ ಕುತೂಹಲಕಾರಿಯಾಗಿತ್ತು. ಕೆಲವು ಸನ್ನಿವೇಶಗಳು ಭಯವನ್ನು ಹುಟ್ಟಿಸುವಂತಿದ್ದವು. ಉದಾ: ತೋಳ ಮನುಷ್ಯ ವಿದ್ಯಾರ್ಥಿಯ ರಕ್ತ ಹೀರುವ ಚಿತ್ರಣ, ತೋಳ ಮನುಷ್ಯನ ಮುಖವಾಡ ಕಿತ್ತು ಎಸೆಯುವ ಸನ್ನಿವೇಶ.. ಇತ್ಯಾದಿ.

—ಎಸ್.ವಿ. ಶ್ರೀನಿವಾಸ್ ಮೈಸೂರು

### ಸಾಮಾನ್ಯ ಧಾರಾವಾಹಿಯಂತಿತ್ತು

ಪತ್ತೇದಾರಿಕೆಯಲ್ಲಿ ನಿರೀಕ್ಷಿಸುವ ಬಿಗಿ, ಕುತೂಹಲ, ಅಪರಾಧಿಯ ಸೂಕ್ಷ್ಮ ನಡೆ ಮೂಡಿಸದೆ, ಕೆಲವೇ ಪಾತ್ರಗಳ ಸುತ್ತ ಗಿರಕಿ ಹೊಡೆದು ಸಾಮಾನ್ಯ ಧಾರಾವಾಹಿಯಂತೆ ಭಾಸವಾಯಿತು.

—ಸುಂದರ್ ಬೆಂಗಳೂರು, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

### ಮೌನಮಂಟಪದ ಪಾಠಗಳು

ಹೆಂಡತಿಯನ್ನು ನೆಲಮಾಳಿಗೆಯಲ್ಲಿ ಕೂಡಿ ಹಾಕಿರುವುದು, ಡ್ರೈವರ್ ಅನ್ನು ಹೂತು ಹಾಕಿರುವುದು, ಊಟದ ಸಮಯದಲ್ಲಿ ನೆಲಮಾಳಿಗೆಗೆ ಹೋಗಿ ಬರುವ ಸಿಬ್ಬಂದಿ, ಹದಿಮೂರು ವರ್ಷಗಳ ಕಾಲ ಯುವಕ–ಯುವತಿ ಪರಸ್ಪರ ನೋಡದೆ ಇದ್ದರೂ ಅವರು ಮದುವೆಯಾಗದೇ ಇದ್ದು, ಬಳಿಕ ನೋಡಿದ ತಕ್ಷಣ ಪ್ರೀತಿ ಉಕ್ಕಿ ಹರಿಯುವುದು, ಕ್ಲೋರೋಫಾರಂ ಸಿಂಪಡಿಸಿದ ಕರ್ಚಿಫ್ ಅನ್ನು ಮೂಗಿನ ಮೇಲೆ ಹಿಡಿದರೆ ವ್ಯಕ್ತಿಗೆ ಜ್ಞಾನ ತಪ್ಪುವುದು.. ಇತ್ಯಾದಿ ಪಾಠಗಳು ಈ ಧಾರಾವಾಹಿಯಿಂದ ತಿಳಿದುಬಂತು.

—ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ